ಅಸಲು ದಾವಾ ಸಂಖ್ಯೆ - 184/2015
ಪಿಡಬ್ಲ್ಯೂ - 01
ದಿನಾಂಕಃ 23.02.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ - ಕುಮಾರಿ ಎಂ ಎನ್ ಆರ್ ವಕೀಲರಿಂದ.**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದ್ದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ದಿನಾಂಕಃ 30.08.1994 ರಂದು ತಹಶೀಲ್ದಾರ ಸವಣೂರ ಇವರು ಮಾಡಿದ ಮಂಜೂರಾತಿ ಆದೇಶ ಪತ್ರದ ದೃಡಿಕೃತ ನಕಲನ್ನು ನಿಪಿ-1 ಎಂದು, ಸರ್ವೆ ನಂ.248 ರ ಪಹಣಿ ಪತ್ರಿಕೆಯ ದೃಡಿಕೃತ ನಕಲನ್ನು ನಿಪಿ-2 ಎಂದು, ಆಸ್ತಿ ನಂ.563 ರ ಆಸ್ತಿ ತೆರಿಗೆ ರಿಜಿಸ್ಟರನ ದೃಡಿಕೃತ ನಕಲನ್ನು ನಿಪಿ-3 ಎಂದು, ತೆರಿಗೆ ಪಾವತಿ ರಶೀದಿಗಳ 2 ದೃಡಿಕೃತ ನಕಲುಗಳನ್ನು ನಿಪಿ-4 ಮತ್ತು 5 ಎಂದು, ಅಸಲು ದಾವೆ ನಂ.153/2009 ರ ತೀರ್ಪು ಹಾಗೂ ಐತೀರ್ಪಿನ ದೃಡಿಕೃತ ನಕಲುಗಳನ್ನು ನಿಪಿ-6 ಮತ್ತು 7 ಎಂದು, ಅಸಲು ದಾವೆ ನಂ.86/2012 ರ ತೀರ್ಪಿನ ದೃಡಿಕೃತ ನಕಲನ್ನು ನಿಪಿ-8 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.